## ಜೋಕ್ಸ್

ರಂಗ: ಅಷ್ಟೊಂದು ಜೋಕ್ಸ್ ಬರೆದಿದ್ದೆಯಲ್ಲ ಏನು ಮಾಡಿದೆ?

ಗುಂಡ: ಎಲ್ಲೂ ಪ್ರಕಟವಾಗಲ್ಲಿಲ್ಲ ಅದಕ್ಕೆ ತೂಕಕ್ಕೆ ಹಾಕಿದೆ

ರಂಗ: ಎಷ್ಟು ದುಡ್ಡು ಬಂತು

ಗುಂಡ: 50 ರೂಪಾಯಿ. ಚಿಲ್ಲರೆ ಇಲ್ಲ ಇನ್ನು ಸ್ವಲ್ಪ ಜೋಕ್ಸ್ ಬರೆದಿಡಿ ಎಲ್ಲಾ ಸೇರಿಸಿ ಒಟ್ಟಿಗೆ 100 ರೂಪಾಯಿ ಕೊಡ್ತೀನಿ ಅಂದ.

## ಬುದ್ಧಿವಂತ

ರಂಗ: ಯಾಕೋ ಒಂದೂ ಜೋಕ್ ಬರೀತಾನೆ ಇಲ್ಲ

ಗುಂಡ: ಹೋಗೋ ಎಷ್ಟು ಜೋಕ್ಸ್ ಬರೆದರು ಯಾರೂ ನಗೋದೇ ಇಲ್ಲ ಪತ್ರಿಕೆಗಳಲ್ಲಿ ಪ್ರಕಟಣೆನೂ ಮಾಡಲ್ಲ ತುಂಬಾ ಬೇಜಾರಾಗಿ ಹೋಗಿದೆ.

ರಂಗ: ಬುದ್ಧಿವಂತರಿಗೆ ಮಾತ್ರ ಅಂತ ಬರೆದು ನೋಡು ಸುಮ್ಮನೆ ಬೇಜಾರು ಮಾಡ್ಕೋಬೇಡ.

## ಬೆಂಕಿ

ರಂಗ: ಏನೋ ಇಷ್ಟೊಂದು ಖುಷಿಯಾಗಿ ಇದ್ದೀಯ.

ಗುಂಡ: ಒಲೆ ಉರಿ ಹಾಕಿದೆ ಬೆಂಕಿಗೆ ತುಂಬಾ ಖುಷಿಯಾಗಿ ಧಗ ಧಗ ಅಂತ ಉರಿಯಿತು ಇನ್ನು ಮೇಲೆ ಹೀಗೆ ಮಾಡ್ತೀನಿ.

ರಂಗ: ಹೀಗೆ ಅಂದ್ರೆ?

ಗುಂಡ: ನೀನು ಬರೆದ ಜೋಕ್ಸ್ ಪುಸ್ತಕ ಒಲೆ ಉರಿಸುವುದಕ್ಕೆ ಹಾಕಿದೆ

## ಬಹುಮಾನ

ರಂಗ: ಯಾಕೋ ಒಂದೂ ಜೋಕ್ ಬರಿಯುತ್ತಾನೇ ಇಲ್ಲ

ಗುಂಡ: ಹೋಗೋ ಎಷ್ಟು ಜೋಕ್ಸ್ ಬರೆದರೂ ಯಾರೂ ನಗುವುದೇ ಇಲ್ಲ ಪತ್ರಿಕೆಗಳಲ್ಲಿ ಪ್ರಕಟಣೆನೂ ಮಾಡಲ್ಲ ತುಂಬಾ ಬೇಜಾರಾಗಿ ಹೋಗಿದೆ.

ರಂಗ: ನನ್ನ ಜೋಕ್ಸ್ ಓದಿ ನಕ್ಕವರಿಗೆ 100 ರೂಪಾಯಿ ಬಹುಮಾನ ಎಂದು ಪ್ರಚಾರ ಮಾಡಿ ನೋಡು. ಸುಮ್ಮನೆ ಬೇಜಾರು ಮಾಡ್ಕೋಬೇಡ

## ಮರೆಗುಳಿ

ರಂಗ: ಜೋಕ್ಸ್ ಹೇಳಿದ್ದೆ ಹೇಳ್ತಾ ಇದ್ದಾರೆ ಆದರೂ ಎಲ್ಲ ನಗುತ್ತಾನೇ ಇದ್ದಾರೆ ಯಾಕೋ?

ಗುಂಡ: ಎಲ್ಲ ಮರೆಗುಳಿಗಳು ಪಾಪ ಈಗ ಹೇಳಿದ್ದು ಈಗಲೇ ಮರೆತು ಬಿಡುತ್ತಾರೆ ಕಣೋ!


ಸಂಗ್ರಹ: ಬಿ.ಆರ್. ಉಷಾ ಬೆಂಗಳೂರು

ಶಾಲೆಯ ಟೀಚರ್ ಕಡೆಯಿಂದ ಪೋಷಕರಿಗೊಂದು ಸಂದೇಶ ಬಂತು. 'ನಿಮ್ಮ ಮಗ ಅಭಿಯ ಮೈ ವಾಸನೆ ಚೆನ್ನಾಗಿಲ್ಲ. ದಯವಿಟ್ಟು ಅವನನ್ನು ಒಳ್ಳೆಯ ಸೋಪು ಬಳಸಿ ಚೆನ್ನಾಗಿ ಸ್ನಾನ ಮಾಡಿಸಿ ಕಳಿಸಿ.

ಪೋಷಕರು ಉತ್ತರ ರೂಪದಲ್ಲಿ ಬರೆದರು, 'ಅಭಿಯೇನೂ ಗುಲಾಬಿ ಹೂವಲ್ಲ. ಅವನನ್ನು ಮೂಸ ಬೇಡಿ; ಸರಿಯಾಗಿ ಪಾಠ ಕಲಿಸಿ ಕೊಟ್ಟರೆ ಸಾಕು'!

***

ಗುಂಡ ತನ್ನ ಕಾರಿನ ಮುಂಭಾಗದ ಗಾಜಿನ ಮೇಲೆ 'ನಿಕಟ ಪೂರ್ವ, ಮಾಜಿ ಕೋವಿಡ್ ರೋಗಿ' ಎಂಬ ಸ್ಟಿಕರ್ ಅಂಟಿಸಿಕೊಂಡ. ಅದನ್ನು ಗಮನಿಸಿದ ಗೆಳೆಯ ಪುಂಡ ಅದೇಕೆ ಹಾಗೆ ಸ್ಟಿಕರ್ ಅಂಟಿಸಿಕೊಂಡು ಡಂಗುರ ಸಾರುತ್ತಿರುವೆ ಎಂದು ವಿಚಾರಿಸಿದ.




ಗುಂಡ ವಿಷದೀಕರಿಸಿದ, 'ಈಗ ಯಾವ ಪೊಲೀಸ್ ಪೇದೆಯೂ ನನ್ನ ಬಾಯಿ ತೆರೆಸಿ ಆಲ್ಕೋಹಾಲ್ ಮಟ್ಟ ಪರೀಕ್ಷಿಸುವ ಸಾಹಸಕ್ಕೆ ಕೈ ಹಾಕುವುದಿಲ್ಲ ಕಣಯ್ಯಾ'!

***

ಕಾಲೇಜು ವಿದ್ಯಾರ್ಥಿ ಗುಂಡನ ಸ್ವಗತ, 'ಈ ಮೊಬೈಲಿನಲ್ಲಿ ಅದೆಂಥ ವಿಟಾಮಿನ್‌ಗಳು ಅಡಗಿವೆಯೋ ನಾ ಕಾಣೆ; ಒಂದು ದಿನ ಅದರಿಂದ ದೂರವಿದ್ದರೂ ಸಂಪೂರ್ಣ ಚೈತನ್ಯವೇ ಉಡುಗಿ ಹೋದಂತೆ ಅದೇನೋ ನಿಶ್ಶಕ್ತಿ ಕಾಣಿಸಿಕೊಳ್ಳುತ್ತದೆ!'

***

ಶಾಲೆಯ ಹಳೆ ವಿದ್ಯಾರ್ಥಿಗಳ ವಾಟ್ಸ್‌ಆ್ಯಪ್ ಗ್ರೂಪೊಂದು ಹುಟ್ಟಿಕೊಂಡು ಅದರಲ್ಲಿ ನೂರಾರು ಮಂದಿ ಸದಸ್ಯರಾದ ಬಳಿಕ ಒಮ್ಮೆ ಅಡ್ಮಿನ್ ಬರೆದರು, 'ದಯವಿಟ್ಟು ಇಲ್ಲಿ ಅವಶ್ಯಕತೆಯಿಲ್ಲದ ಸಂದೇಶ ರವಾನಿಸಬೇಡಿ. ನಾವು ಗ್ರೂಪ್ ಹುಟ್ಟು ಹಾಕಿರುವ ಉದ್ದೇಶವೇ ಬೇರೆ. ಗುಡ್ ಮಾರ್ನಿಂಗ್, ಗುಡ್ ನೈಟ್, ಅನಗತ್ಯ ಥಮ್ಸ್ ಅಪ್, ಸ್ಮೈಲಿ ರೀತಿಯ ಮೊದಲಾದ ಸಂಕೇತಗಳ ಅವಶ್ಯಕತೆಯಿಲ್ಲ'.

ಈ ಮಾತಿಗೆ ಒಪ್ಪಿಗೆ ನೀಡುವ ಸಂಬಂಧ ಆ ಗ್ರೂಪಿನ ಅನೇಕ ಸದಸ್ಯರು ಕೆಳಗೆ ನೂರಾರು ಥಮ್ಸ್ ಅಪ್ ಸಂಕೇತಗಳನ್ನು ಹಾಕಿ ಆ ಗ್ರೂಪಿಗೆ ಕಳೆ ಮೂಡಿಸಿದ್ದರು!

***

ಬ್ಯಾಂಕಿನ ಲೋನ್ ಕೌಂಟರಿನಲ್ಲಿ...

ಗುಂಡ: ನೀವು ನನಗೆ ಟ್ಯಾಕ್ಸಿ ಖರೀದಿಸಲು ಲೋನ್ ಕೊಟ್ಟಿದ್ದೀರಿ.

ಸಿಬ್ಬಂದಿ: ಹೌದು, ನೀವೀಗ ಅದರ ಮರುಪಾವತಿಯ ಕಂತು ಕಟ್ಟಲು ಬಂದಿರುವಿರಾ?

ಗುಂಡ: ಇಲ್ಲ, ನನಗೀಗ ಇನ್ನೊಂದು ಲೋನ್ ಬೇಕು.

ಸಿಬ್ಬಂದಿ: ಇನ್ನೊಂದು? ಅದು ಯಾಕೆ?

ಗುಂಡ: ಪೆಟ್ರೋಲ್ ಖರೀದಿಸಲು!

***

60 ದಾಟಿದ ಗುಂಡಣ್ಣನವರು ಕೊರೊನಾ ವ್ಯಾಕ್ಸಿನ್ ಹಾಕಿಸಿಕೊಂಡು ಬಂದರು.

ಸಂದರ್ಶಕ: ನಿಮಗೇನಾದರೂ ಪಾರ್ಶ್ವ ಪರಿಣಾಮ ಗೋಚರಿಸಿತೆ?

ಗುಂಡಣ್ಣ: ಹೇಳಿಕೊಳ್ಳುವಂತಹ ಅಡ್ಡ ಪರಿಣಾಮವೇನೂ ಆಗಿಲ್ಲ; ಆದರೆ ಅವರು, 'ಇನ್ನು 45 ದಿನ ಆಲ್ಕೋಹಾಲ್ ಕುಡಿಯುವಂತಿಲ್ಲ' ಎಂದಾಗ ಮಾತ್ರ ಕೊಂಚ ತಲೆಸುತ್ತು ಬಂದ ಹಾಗಾಯ್ತು!

***

ಗುಂಡ: ಡಾರ್ಲಿಂಗ್, ಇವತ್ತಿನಿಂದ ನಾವು ಒಂದೇ ತಟ್ಟೆಯಲ್ಲಿ ಊಟ ಮಾಡೋಣವೆ?

ಶ್ರೀಮತಿ ಗುಂಡ: ಸರಿ ಕಣ್ರೀ, ನಿಮಗೆ ಇಷ್ಟೊಂದು ಪ್ರೀತಿ ಉಕ್ಕುತ್ತಿರುವಾಗ ನಾನೇಕೆ ಬೇಡವೆನ್ನಲಿ.

ಸ್ವಗತದಲ್ಲಿ ಪ್ರೀತಿ ಎಲ್ಲಿಂದ ಬಂತು ಒಂದು ತಟ್ಟೆಯಾದರೂ ತೊಳೆಯಲು ಕಡಿಮೆ ಆಗುತ್ತೆ ಎನ್ನುವ ಚಿಂತನೆ.

***

ಸಾಮಾನ್ಯ ಪ್ರಜೆ ಗುಂಡ ಉವಾಚ, '2020 ರಲ್ಲಿ ನಮ್ಮ ದೇಶವು ಸೂಪರ್ ಪವರ್ ಆಗಲಿದೆ ಎಂದು ಶಾಲೆಯಲ್ಲಿ ಕಲಿಸಿದ್ದರು. ಈಗ ನೋಡಿದರೆ ಪವರ್ ಹೋಗಿ ಮುಖಮೂತಿಗೆ ಕವರ್ ಹಾಕಿ ಓಡಾಡುವ ಪ್ರಸಂಗ ಎದುರಾಗಿದೆ'!

ಸಂಗ್ರಹ: ರಮಣ್ ಶೆಟ್ಟಿ ರೆಂಜಾಳ್ ಮುಂಬೈ